ಗಳಿಗೆ ೩,೦೦೦ ರೂಪಾಯಿಗಳ ಧನ ಸಹಾಯವನ್ನು ಕೊಡಲಾಗುತ್ತಿದೆ. ಈ ರೀತಿ ಇದುವರೆವಗೂ ೨೦೬ ದಂಪತಿಗಳಿಗೆ ೬ ಲಕ್ಷದ ೧೮ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ರಾಜ್ಯ ಪ್ರಾಮಾಣಿಕ ಶಾಲೆಯಲ್ಲಿ ೫೦ ಜನರು ಮಂತ್ರಿ ರಾಜ್ಯ ಗೃಹದಲ್ಲಿ ೬೦ ಜನರು ಪ್ರತಿ ವರ್ಷ ತರಬೇತಿ ಹೊಂದಿ ಹೊರ ಬರುತ್ತಿದ್ದಾರೆ.

ಅಧ್ಯಕ್ಷರು.— ಶ್ರೀಮತಿ ಮನೋರಮ ಬಂಧ್ವರಾಜ್ ಅವರ ಪ್ರಶ್ನೆಗೆ ಮಂತ್ರಿಯವರಿ ಕಾಲಾವಕಾಶ ಕೋರಿದ್ದಾರೆ. ಈಗ ಶ್ರೀ ಭೂಪತಿಯವರು ಅಲ್ಪ ಕಾಲಾವಧಿ ಪ್ರಶ್ನೆಯನ್ನು ಕೇಳುವುದು.

ಅಲ್ಪಕಾಲಾವಧಿ ಪ್ರಶ್ನೆ

ಮಳೆಯಿಂದ ಉಟಾಗಿರುವ ನಷ್ಟದ ಬಗ್ಗೆ

೧೨೪. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕು ಉಬ್ಬಲ ಗುಂಡಿಯಲ್ಲಿ ೧೯೬೭ರ ಅಕ್ಟೋಬರ್ ತಿಂಗಳಲ್ಲಿ ಹಠಾತ್ತನೆ ಬಂದ ಭಾರಿ ಮಳೆಯಿಂದಾಗಿ ರೈತರಿಗೆ ಭಾರಿ ನಷ್ಟ ಉಂಟಾಗಿರುವುದು ನಿಜವಲ್ಲವೆ?

ಆ) ಈ ಮಳೆಯಿಂದ ಎಷ್ಟು ಮಂದಿ ರೈತರಿಗೆ ನಷ್ಟ ಉಂಟಾಗಿದೆ ಹಾಗೂ ನಷ್ಟದ ಅಂದಾಜು ಮೊಬಲಗೆಷ್ಟು?

ಇ) ಈ ವರೆಗೆ ರೈತರಿಗೆ ನೀಡಿರುವ ಪರಿಹಾರ ಧನವೆಷ್ಟು? ಪ್ರತ್ಯೇಕ ವಿವರ ನೀಡುವುದು.

ಈ) ಪ್ರಕೃತಿ ವಿಕೋಪಕ್ಕೆ, ತುತ್ತಾಗಿರುವ ರೈತರ ಸಾಲವನ್ನು ಮನ್ನಾ ಮಾಡಲಾಗುವುದೇ ಹಾಗೂ ಭೂಮಿದುರಸ್ತಿಗೆ ಮತ್ತು ತಳಿ ಸಾಲ ಸೌಲಭ್ಯ ಒದಗಿಸಲಾಗುವುದೆ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು)

ಅ) ಹೌದು

ಆ) ಸಂಡೂರು ತಾಲ್ಲೂಕಿನ ಉಬ್ಬಲ ಗುಂಡಿಯಲ್ಲಿ ಮಳೆಯಿಂದ ೪೬ ರೈತರು ನಷ್ಟಕ್ಕೆ ಒಳಪಟ್ಟಿದ್ದು ಸುಮಾರು ೧,೨೦,೬೦೦-೦೦ ರೂ. ಗಳ ನಷ್ಟ ಉಂಟಾಗಿದೆ.

ನಷ್ಟಕ್ಕೀಡಾದ ೪೬ ರೈತರ ಪೈಕಿ ಪರಿಹಾರಕ್ಕಾಗಿ ೨೬ ಜನರು ಅರ್ಹರಿದ್ದು ಅವರಿಗೆ ಪರಿಹಾರ ನೀಡಲಾಗಿದೆ. ವಿವರ ಅನುಬಂಧ 'ಅ' ನಲ್ಲಿ ಲಗತ್ತಿಸಲಾಗಿದೆ.

ಇ) ಪ್ರಕೃತಿ ವಿಕೋಪದಲ್ಲಿ ನೊಂದ ರೈತರಿಗೆ ಸಾಲವನ್ನು ಮನ್ನಾ ಮಾಡಲು ಬಾಲ್ಲಿ, ನಿಯಮಾವಳಿಯ ಅಡಿಯಲ್ಲಿ ಅವಕಾಶ ವಿರುವುದಿಲ್ಲ. ಆದರೆ ಬೆಳೆ ನಾಶವಾದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಬೆಳೆ ಇಳುವರಿಯನ್ನು ಆರಾಣಿಗಿಂತ ಕಡಿಮೆಯೆಂದು ಘೋಷಿಸಿದ ಪಕ್ಷದಲ್ಲಿ ಬೆಳೆ ಸಾಲವನ್ನು (ಅಲ್ಪಾವಧಿ ಸಾಲವನ್ನು) ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ನಾಬಾರ್ಡ್ ನಿಯಮಗಳಲ್ಲಿ ಅವಕಾಶವಿದೆ ಇದರಿಂದಾಗಿ ರೈತ ಸದಸ್ಯರು ಹೊಸ ಬೆಳೆ ಸಾಲ ಪಡೆಯಲು ಯಾವ ಅಡ್ಡಿಯೂ ಇರುವುದಿಲ್ಲ.

ಈ) ಭೂ ಅಭಿವೃದ್ಧಿ, ಕಾರ್ಯ ಕಾರಿತಂತೆ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಸಾಲ ಒದಗಿಸಲು ಅವಕಾಶವಿದೆ.

ಅನುಬಂಧ "ಅ"

ಗ್ರಾಮ	ರೈತರ ಹೆಸರು	ಮಂಜೂರು ಮಾಡಿದ ಪರಿಹಾರ ಧನ
೧) ಉಬ್ಬಲಗಂಡಿ	೧ ಹೂನ್ನರಪ್ಪ ತಂದೆ ಪಣ್ಣುಕಪ್ಪ	೩೦೦-೦೦
	೨ ವಲ್ಲಯ್ಯ ತಂದೆ ಶಿವಲಿಂಗಪ್ಪ	೨೦೦-೦೦
	೩ ಬಂಡ್ರಪ್ಪ ತಂದೆ ಸಂಜೀವಪ್ಪ	೫೦೦-೦೦
	೪ ಗೌರಪ್ಪ ತಂದೆ ಚನ್ನಬಸಪ್ಪ	೩೦೦-೦೦
	೫ ದೊಡ್ಡ ಬಸಪ್ಪ ತಂದೆ ಅದಿಬಸಪ್ಪ	೩೦೦-೦೦
	೬ ಯರೇಗೌಡ ತಂದೆ ದೊಡ್ಡ ಕಟ್ಟಿಗೌಡ	೩೦೦-೦೦
	೭ ಮುದಕಪ್ಪ ತಂದೆ ಶಿದ್ದಪ್ಪ	೩೦೦-೦೦
	೮ ಹರಿಜನ ಸಣ್ಣ ಯಲ್ಲಪ್ಪ ತಂದೆ ದುರುಗಪ್ಪ	೩೦೦-೦೦
	೯ ಮಲ್ಲವ್ವ ಗಂಡ ತಿಪ್ಪಣ್ಣ	೩೦೦-೦೦
	೧೦ ಪೊಂಪನಗೌಡ ತಂದೆ ಸಣ್ಣ ಕಟ್ಟಿಗೌಡ	೩೦೦-೦೦
	೧೧ ವುದೇದ ಬಸಪ್ಪ ತಂದೆ ಪಂಪಣ್ಣ	೩೦೦-೦೦
	೧೨ ಗಣದ ಮನಿ ಕೊಟ್ರಪ್ಪ ತಂದೆ ಶಿದಪ್ಪ	೩೦೦-೦೦
	೧೩ ಕೊಟ್ರಬಸಪ್ಪ ತಂದೆ ದೊಡ್ಡ ಕೊಟ್ರುಗೌಡ	೩೦೦-೦೦
	೧೪ ಹರಿಜನ ಬಸಪ್ಪ ತಂದೆ ರಂಗಪ್ಪ	೩೦೦-೦೦
	೧೫ ಉದೇದ ಕಟ್ಟಿಬಸಪ್ಪ ತಂದೆ ಪಂಪನಗೌಡ	೩೦೦-೦೦
	೧೬ ವೀರಬದ್ರಗೌಡ ತಂದೆ ಕಟ್ಟಿಗೌಡ	೪೦೦-೦೦
	೧೭ ಎ. ಕಟ್ಟಿ ಬಸಪ್ಪ ತಂದೆ ಕಟ್ಟಿಗೌಡ	೪೦೦-೦೦
	೧೮ ಕಟ್ಟಿ ಬಸವನಗೌಡ ತಂದೆ ದೊಡ್ಡ ಕಟ್ಟಿಗೌಡ	೩೦೦-೦೦
	೧೯ ವೀರಭದ್ರಪ್ಪ ತಂದೆ ಕಟ್ಟಿಗೌಡ	೩೦೦-೦೦
	೨೦ ಲಕ್ಷ್ಮಯ್ಯ ತಂದೆ ತಿಪ್ಪಣ್ಣ	೩೦೦-೦೦
	೨೧ ಹರಿಜನ ಗಂಡೆಪ್ಪ ತಾಯಿ ಹನುಮಕ್ಕ	೩೦೦-೦೦
	೨೨ ರಾಮಲಿಂಗಯ್ಯ	೩೦೦-೦೦
	೨೩ ಲಕ್ಷ್ಮಯ್ಯ ತಂದೆ ಹೊನ್ನಪ್ಪ	೪೦೦-೦೦
	೨೪ ಬಿ ಕೆ. ದೇವರಾಜ ತಂದೆ ಶರಬನಗೌಡ	೩೦೦-೦೦
	೨೫ ಶರಬನಗೌಡ ತಂದೆ ಬಸವನಗೌಡ	೩೦೦-೦೦
	೨೬ ವೈ. ರುದ್ರಪ್ಪ ತಂದೆ ಬಸಪ್ಪ	೫೦೦-೦೦
	ಒಟ್ಟು	೮೫೦೦-೦೦

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ಕಳೆದ ೨ ತಿಂಗಳ ಕೆಳಗೆ ಬಾರಿ ಮಳೆ ಬಂದಿದ್ದರಿಂದ ೪೬ ಜನ ರೈತರಿಗೆ ನಷ್ಟವಾಗಿದೆ ಎಂದು ತಾವು ಇಲ್ಲಿ ಹೇಳಿದ್ದೀರಿ. ಆದರೆ ಇದು ಸರಿಯಿಲ್ಲ. ಇನ್ನೂ ಹೆಚ್ಚು ಜನ ರೈತರಿಗೆ ನಷ್ಟವಾಗಿದೆ. ಆ ದಿವಸ ಎಷ್ಟು ಭಾರಿ ಪ್ರಮಾಣದ ಮಳೆ ಆಗಿದೆ ಎಂಬುದನ್ನು ಹೇಳಬೇಕಾದರೆ ೧೨ ಟನ್ ಕಬ್ಬಿಣವನ್ನು ತುಂಬಿಕೊಂಡು ಹೋಗುತ್ತಿದ್ದ ಒಂದು ಲಾರಿ ಉರುಳಿಬಿದ್ದು ರಾವಣ ಎನ್ನುವವನು ಸತ್ತಿದ್ದಾನೆ. ಅದನ್ನು ತಾವು ನಿಮ್ಮ ಉತ್ತರದಲ್ಲಿ ಸೇರಿಸಿಲ್ಲ. ನಿಮ್ಮ ಅಂದಾಜಿನ ಪ್ರಕಾರ ೧,೨೦,೬೦೦ ರೂಪಾಯಿಗಳಷ್ಟು ನಷ್ಟ ಉಂಟಾಗಿದೆ ಎಂದು ಹೇಳಿದ್ದೀರಿ ; ಮತ್ತು ನಷ್ಟಕ್ಕೊಳಗಾದವರಿಗೆ ೮೫೦೦ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅಲ್ಲಿ ಆಗಿರತಕ್ಕ ನಷ್ಟಕ್ಕೂ ಮತ್ತು ತಾವು ಕೊಟ್ಟಿರತಕ್ಕ ಪರಿಹಾರದ ಹಣಕ್ಕೂ ಒಂದಕ್ಕೊಂದು ಹೊಂದಾಣಿಕೆಯೇ ಆಗುತ್ತಿಲ್ಲ. ಏತಕ್ಕೆ ಇಷ್ಟೊಂದು ಅಂತರ ಇನ್ನೊಂದುಸಾರಿ ಇದರ ಬಗ್ಗೆ ತಾವು ಸರ್ವೆ ಮಾಡಿಸಂತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತರಿಗೆ ಭಾರಿ ನಷ್ಟ ಉಂಟಾಗಿರುವ ಬಗ್ಗೆ ತಾವು ಪ್ರಶ್ನೆಯನ್ನು ಕೇಳಿದ್ದೀರಿ. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ೪೬ ಜನರ ಪೈಕಿ ೨೬ ಜನ ಪರಿಹಾರ ಪಡೆಯುವುದಕ್ಕೆ ಅರ್ಹರಾಗಿದ್ದಾರೆಂಬುದನ್ನು ತಿಳಿದು ಪರಿಹಾರವನ್ನು ಕೊಟ್ಟಿದೆ. ಇನ್ನು ತಾವು ಹೇಳಿದಂತೆ ಆಗಿರತಕ್ಕ ನಷ್ಟಕ್ಕೂ ಮತ್ತು ನಾವು ಕೊಟ್ಟಿರತಕ್ಕ ಪರಿಹಾರಕ್ಕೂ ಬಹಳ ಅಂತ ಇದೆ ಎಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಎಷ್ಟು ನಷ್ಟವಾಗಿರುತ್ತದೆ ಅಷ್ಟನ್ನೂ ನಾವು ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ ನಮಗೆ ಒಂದು ನಿಯಮ ಇದೆ. ಆ ನಿಯಮ ಬದಲಾಗಬೇಕು ಅದನ್ನು ಬದಲಾವಣೆ ಮಾಡುವ ಬಗ್ಗೆಯೂ ನಾವು ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಯು. ಭೂಪತಿ —ಮಾನ್ಯ ಸಭಾಧ್ಯಕ್ಷರೆ, ತಹಸೀಲ್ದಾರ್‌ರವರು ಇಂಥ ಪ್ರಕರಣಗಳಲ್ಲಿ ೩೦೦ ರೂಪಾಯಿಗಳವರೆಗೂ ಪರಿಹಾರವನ್ನು ಕೊಡುವುದಕ್ಕೆ ಅಧಿಕಾರ ಇದೆ. ಜಿಲ್ಲಾಧಿಕಾರಿಯವರಿಗೆ ೫ ಸಾವಿರದವರೆಗೆ ಕೊಡುವುದಕ್ಕೆ ಅಧಿಕಾರವಿದೆ. ಇಲ್ಲಿ ತಾವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಇಬ್ಬರಿಗೆ ತಲಾ ೫೦೦ ರೂಪಾಯಿಗಳಂತೆ ಕೊಟ್ಟಿದ್ದೀರಿ, ೩ ಜನರಿಗೆ ೪೦೦ ರೂಪಾಯಿಗಳಂತೆ ಕೊಟ್ಟಿದ್ದೀರಿ. ಇನ್ನುಳಿದವರಿಗೆ ೨೦೦. ೩೦೦ ರೂಪಾಯಿಗಳಂತೆ ಕೊಟ್ಟಿದ್ದೀರಿ. ಇಲ್ಲಿ ನಷ್ಟದ ಪ್ರಮಾಣವನ್ನು ಗಮನಿಸಿದರೆ, ಕೆಲವರು ೫-೬ ಎಕರೆ ಜಮೀನುಗಳನ್ನು ಪೂರ್ತಿಯಾಗಿ ಕಳೆದುಕೊಂಡಿದ್ದಾರೆ, ಕೆಲವರು ಮನೆಗಳನ್ನು ಕಳೆದುಕೊಂಡು ಬಹಳ ನಷ್ಟವನ್ನ ಹೊಂದಿದ್ದಾರೆ. ಹೆಚ್ಚು ನಷ್ಟಕೊಳಗಾಗಿರುವವರಿಗೆ ಹೆಚ್ಚು ಪರಿಹಾರವನ್ನು ಕೊಡಿಸಲು ನಾನು ಮಾನ್ಯ ಮಂಖ್ಯೆ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಹೆಚ್ಚಿಗೆ ಹಣವನ್ನು ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಕಾನೂನು ಅಡ್ಡ ಬರುತ್ತದೆ. ಆದ್ದರಿಂದ ನೀವೇ ಹೆಚ್ಚಿಗೆ ಹಣವನ್ನು ಕೊಡಿಸಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು ಎಂದರೆ ನಾನು ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇನೆ ಎಂದು ಹೇಳಿದರು. ಜಿಲ್ಲಾಧಿಕಾರಿಯವರು ಹೆಚ್ಚು ದುಡ್ಡನ್ನು ಕೊಡುವುದಕ್ಕೆ ಅವರಿಗೆ ಅಧಿಕಾರ ಇಲ್ಲ. When he does not have more power he cannot give morec ompensation. So I request you to give compensation from the Government. ತಾವು ಮುಖ್ಯ ಮಂತ್ರಿಗಳ ರಿಲೀಫ್ ಫಂಡ್ ನಿಂದಲಾದರೂ ಕೊಡಿ ಅಥವಾ ಬೇರೆ ಇನ್ನಾವುದಾದರೂ ಫಂಡ್‌ನಿಂದಲಾದರೂ ಕೊಡಿ. ಒಟ್ಟಿನಲ್ಲಿ ಯಾರು ನಷ್ಟಕ್ಕೊಳಗಾಗಿದ್ದಾರೆ ಅವರಿಗೆ ಹೆಚ್ಚು ಪರಿಹಾರವನ್ನು ಒದಗಿಸಿಕೊಟ್ಟು ಅನುಕೂಲ ಮಾಡಿ ಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇವಲ ಸಂಡೂರಿನಲ್ಲಿ ಒಂದೇ ಕಡೆ ಅಲ್ಲ. ಮೈಸೂರು ಮತ್ತಿತರ ಜಿಲ್ಲೆಗಳಲ್ಲೂ ಕೂಡ ಹೆಚ್ಚಿನ ನಷ್ಟವಾಗಿದೆ. ಆದರೆ ನಮಗೆ ಈಗಿರತಕ್ಕ ನಿಯಮಾವಳಿ ಏನಿದೆ. ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಏನಿದೆ ಅದರ ಪ್ರಕಾರ ನಾವು ಪರಿಹಾರವನ್ನು ಕೊಡಬೇಕಾಗುತ್ತದೆ. ರಿಲೀಫ್ ಮೆಷರ್ಸ್‌ಗೋಸ್ಕರವಾಗಿಯೇ ಇರತಕ್ಕೆ ಹೆಡ್‌ನಲ್ಲಿ ನಾವು ಪರಿಹಾರವನ್ನು ಕೊಡಬೇಕಾಗುತ್ತದೆ. ಫ್ಲಡ್ಸ್‌ಗೆ ಸಿಕ್ಕಿದವರಿಗೂ ಕೊಡಬೇಕಾಗುತ್ತದೆ. ಇರತಕ್ಕ ಹಣದಲ್ಲಿ ಆಕಸ್ಮಿಕ ಘಟನೆಗಳು ಏನು ನಡೆಯುತ್ತವೆ ಅದಕ್ಕೆಲ್ಲಾ ಕೊಡಬೇಕಾಗುತ್ತದೆ. ಇಂಡಿವಿಜುಯಲ್ ಆಗಿ ಒಬ್ಬೊಬ್ಬರಿಗೆ ಕೊಡಬಹುದು. ಆದರೆ ಸಾಮೂಹಿಕವಾಗಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್. —ಗುಡಿಸಲು ಸುಟ್ಟುಹೋದವರಿಗೆ ಕೊಟ್ಟಿದ್ದೀರಿ ಫ್ಲೆಡ್ಸ್‌ಗೆ ಸಿಕ್ಕಿದವರಿಗೆ ಕೊಟ್ಟಿದ್ದೀರಿ. ತಾವು ಸಾಮೂಹಿಕವಾಗಿಯೂ ಕೊಟ್ಟಿದ್ದೀರಿ.

ಶ್ರೀ ಎಸ್ ಆರ್. ಬೊಮ್ಮಾಯಿ.—ಗುಡಿಸಲುಗಳು ಸುಟ್ಟಾಗಲೂ ಕೊಟ್ಟಿದ್ದೇವೆ, ಫೈರ್ ಆಕ್ಸಿಡೆಂಟ್ ಆದಾಗಲೂ ಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ೫೦೦. ೧೦೦೦, ೧೫೦೦ ರೂಪಾಯಿಗಳವರೆಗೂ ಕೊಟ್ಟಿದ್ದೇವೆ. ಗುಡಿಸಲುಗಳು ಸುಟ್ಟರೆ ೫೦ ಸಾವಿರ ರೂಪಾಯಿಗಳವರೆಗೂ ಕೊಡಬಹುದು. ಆದರೆ ಇಡೀ ರಾಜ್ಯದಲ್ಲಿ ಇಂಥಾದ್ದನ್ನು ಲೆಕ್ಕ ಹಾಕಿದರೆ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೊಡಿ. ನೊಂದವರು, ನಷ್ಟಕ್ಕೊಳಗಾದವರು ಕೇಳಿದರೆ ಕೊಡಿ. ಅದನ್ನು ಯಾರೂ ಬೇಡವೆಂದು ಹೇಳುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಹಣವನ್ನು ಕೊಟ್ಟರೆ ನಮ್ಮ ಆಭ್ಯಂತರವಿಲ್ಲ. ಅನೇಕ ಕಡೆ ಇಂಥ ಬೇಡಿಕೆ ಬಂದಿದೆ. ಇಂಥ ಸಂದರ್ಭದಲ್ಲಿ ಹೆಚ್ಚು ಸಹಾಯ ಮಾಡಲಿಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಏತಕ್ಕೆಂದರೆ ಪರಿಹಾರ ಕೊಡುವಾಗ ಅವರಿಂದ ಧನ ಸಹಾಯವೂ ಬೇಕಾಗುತ್ತದೆ. ಸಾಕಷ್ಟು ಅನುಕೂಲವಾಗುವಂಥ ರೀತಿಯಲ್ಲಿ ಸಹಾಯ ಮಾಡೋಣವೆಂದು ಮಾಡುತ್ತಿದ್ದೇವೆ. ರೈತರು ಬೆಳೆದಂಥ ಬೆಳೆ, ಭೂಮಿ ಕೊಚ್ಚಿ ಹೋಗಿದ್ದರೆ ಅಲ್ಲಿ ಯಾವರೀತಿ ಸಹಾಯ ಮಾಡಬೇಕು ಎನ್ನುವ ಬಗ್ಗೆ ಸಾಯಿಲ್ ಕನ್ಸರ್‌ವೇಷನ್ ಡಿಪಾರ್ಟ್‌ಮೆಂಟ್ ನವರನ್ನು ಕೇಳಿ ಅವರಿಗೆ ಯಾವರೀತಿ ಸಹಾಯ ಮಾಡಬೇಕು ಎನ್ನುವುದನ್ನು ವಿಚಾರ ಮಾಡಿ, ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ, ಡಿ.ಪಿ.ಎ.ಪಿ. ಇವುಗಳ ಮುಖಾಂತರವೂ ಕೂಡ ಸಹಾಯ ಮಾಡಲು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಯಂ. ಭೂಪತಿ.—ಮಾನ್ಯ ಅಧ್ಯಕ್ಷರೇ ನಾನು ಏತಕ್ಕೆ ಒತ್ತಾಯ ಮಾಡುತ್ತಿದ್ದೇನೆಂದರೆ ಬಳ್ಳಾರಿ ಜಿಲ್ಲೆ ಪ್ರತಿ ವರ್ಷ ಪ್ರಕೃತಿಯ ವಿಕೋಪಕ್ಕೆ ತುತ್ತಾಗುತ್ತಲೇ ಇರುತ್ತದೆ. ೧೯೫೫ನೇ ಇಸವಿಯಲ್ಲಿ ಭಾರೀ ಮಳೆ ಬಂದ ಕಾರಣದಿಂದಾಗಿ ೧೯ ಜನರು ಕೊಟ್ಟಿ ಹೋಗಿ ಸ್ಪಾಟ್ ಡೆತ್ ಆಗಿದೆ. ೧೯ ಜನರ ಒಂದೊಂದು ಕುಟುಂಬಕ್ಕೆ ಸರ್ಕಾರ ಪರಿಹಾರ ಧನವೆಂದು ಐದು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಬೇರೆ ಏನೂ ಸಹಾಯವನ್ನು ಕೊಟ್ಟಿಲ್ಲ. ಇಷ್ಟಿಗೆ ಜನತಾ ಮನೆಗಳನ್ನು ಸಹ ಕೊಟ್ಟಿಲ್ಲ. ಪರಿಹಾರವನ್ನು ಕೊಡಲು ಕೇಂದ್ರ ಸರ್ಕಾರದ ಮೇಲೆ ಹೇಳಿದರೆ ಹೇಗೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಎಲ್ಲಿ ಭಾರಿ ನಷ್ಟಕ್ಕೆ ರೈತರು ಒಳಗಾಗಿರುತ್ತಾರೆ ಅಂಥ ಕಡೆ ರೈತರಿಗೆ ಕೊಟ್ಟಿರತಕ್ಕಂಥ ಸಾಲವನ್ನಾದರೂ ಮನ್ನಾ ಮಾಡುತ್ತೀರಾ ಎಂದು ಕೇಳುತ್ತೇನೆ ಇಷ್ಟೆಂದು ಕೊಂದರೆಗೆ ಈಡಾಗಿರತಕ್ಕಂಥ ರೈತರನ್ನು ಸಾಲ ಕಟ್ಟಬೇಕೆಂದು ಕೇಳಿದರೆ ಅವರು ಯಾವ ರೀತಿ ಸಾಲ ಕಟ್ಟಲು ಸಾಧ್ಯವಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಹುಣಸೂರಿನಲ್ಲಿ ಮಳೆಯ ಪರಿಣಾಮವಾಗಿ ಒಂದು ಬಸ್ ಕೊಚ್ಚಿಹೋಯಿತು. ನಾನು ಹೇಳುವುದು ಪರಿಹಾರವನ್ನು ಕೊಡಬಾರದೆಂದು ಹೇಳುತ್ತಿಲ್ಲ, ರೈತರಿಗೆ ಕೊಟ್ಟಿರತಕ್ಕಂಥ ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತಿದ್ದೀರಿ. ಪರಿಶೀಲನೆ ಮಾಡುತ್ತೇನೆ.

ದಿದನ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರೆವಿನ್ಯೂ ಗ್ರಾಮ ಸಹಾಯಕರುಗಳಿಗೆ ವೇತನ

೯೧೨. ಶ್ರೀ ಜಿ. ಎಸ್. ಶಿವನಂಜಪ್ಪ (ಹಟ್ಟಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ರೆವಿನ್ಯೂ ಗ್ರಾಮ ಸಹಾಯಕರುಗಳಿಗೆ ವೇತನ ಕೊಡಲು ನಿಗದಿಪಡಿಸಲು ತೀರ್ಮಾನಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ವರ್ಷಗಳಿಂದ ವೇತನ ಕೊಟ್ಟಿರುವುದಿಲ್ಲ ಹಾಗೂ ಯಾವಾಗ ವೇತನವನ್ನು ಪಾವತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು) —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.